SRI H. D. DEVE GOWDA (Minister for Public Works and Irrigation),—

a) Normally, there will be always standjng water in Kotekere, whereas Devikere gets water during Monsoon only.

b) Minor repairs are to be done.

c) Action will be taken, depending on the availability of funds.

ರಾಜ್ಯದಲ್ಲಿ ಮಿನಿ ವಿಧಾನಸೌಧ ಮಾದರಿಗಳ ಕಚೇರಿ ಕಟ್ಟಡ ಕಟ್ಟುವ ಬಗ್ಗೆ

೧೦೯೬. ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಎಷ್ಟು ತಾಲ್ಲೂಕುಗಳಲ್ಲಿ ಸರ್ಕಾರದವರು ಮಿನಿ ವಿಧಾನಸೌಧ ಮಾದರಿಯಲ್ಲಿ ಕಚೇರಿ ಸಂಕೀರ್ಣ ಕಟ್ಟಡ ಕಟ್ಟಲು ಉದ್ದೇಶಿಸಿರುವರೆ,

ಆ) ಹಾಗಿದ್ದಲ್ಲಿ, ಹೊಸದುರ್ಗದಲ್ಲಿ ಕಟ್ಟಲಾಗುವ ತಾಲ್ಲೂಕಿಂ ಕಚೇರಿ ಕಟ್ಟಡಕ್ಕೆ ಸರ್ಕಾರದವರು ನೀಡಿರುವ ಹಣವೆಷ್ಟು ಹಾಗೂ ಅವರಲ್ಲಿ ಇದುವರೆಗೆ ಎಷ್ಟು ಹಣ ಖರ್ಚಾಗಿದೆ ಮತ್ತು ಇದು ಪೂರ್ಣಗೊಳ್ಳಲು ಎಷ್ಟು ದಿನಗಳು ಬೇಕಾಗುತ್ತದೆ ?

ಶ್ರೀ ವಿ. ಎಲ್. ಪಾಟೀಲ್ (ಕಂದಾಯ ಮಂತ್ರಿಗಳು).—

ಅ) ೨೩ ತಾಲ್ಲೂಕುಗಳು.

ಆ) ರೂ. ೫೦,೦೦೦ ರೂಪಾಯಿಗಳ ಅನುದಾನವಿದೆ.

ರೂ. ೮,೫೦,೨೦೦ ರೂಪಾಯಿಗಳು ಖರ್ಚು ಮಾಡಲಾಗಿದೆ.

ಸದರಿ ಕಟ್ಟಡದ ಕಾಮಗಾರಿಯನ್ನು ಮುಂಗಿಸಲು ೩ ವರ್ಷಗಳ ಅವಧಿ ಬೇಕಾಗುವುದು. ಈ ಕೆಲಸವನ್ನು ಮಾರ್ಚಿ ೧೯೮೮ ಒಳಗೆ (ಮುಕ್ತಾಯವನ್ನು ಹೊರತುಪಡಿಸಿ) ಮುಗಿಯುವ ನಿರೀಕ್ಷೆಯಿದೆ.

ಶಿವಮೊಗ್ಗ ಜಿಲ್ಲೆ ಹೊಸನಗರದಲ್ಲಿ ಹೆಣ್ಣುಮಕ್ಕಳ ವಿದ್ಯಾರ್ಥಿನಿಲಯಗಳ ಬಗ್ಗೆ

೧೨೫೩. (ಬಿ). ಶ್ರೀ ಬಿ. ಸ್ವಾಮಿರಾವ್(ಹೊಸನಗರ). – ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿವಮೊಗ್ಗ ಜಿಲ್ಲೆ ಹೊಸನಗರ ಹೆಣ್ಣುಮಕ್ಕಳ ವಿದ್ಯಾರ್ಥಿನಿಲಯದಲ್ಲಿರುವ ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು,

ಆ) ಸಿಬ್ಬಂದಿ ವರ್ಗ, ಅಡಿಗೆಯವರು, ಸದರಿ ವಿದ್ಯಾರ್ಥಿನಿಲಯದಲ್ಲಿ ಎಷ್ಟು ಜನರಿದ್ದಾರೆ,

ಇ) ಸಿಬ್ಬಂದಿ ವರ್ಗದ ತಿಂಗಳ ಸಂಬಳ ಒಟ್ಟು ಮೊತ್ತವೆಷ್ಟು ಹಾಗೂ ವಿದ್ಯಾರ್ಥಿನಿಲಯದ ಒಂದು ತಿಂಗಳ ಖರ್ಚೆಷ್ಟು ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಸಚಿವರು).—

ಅ) ೨೧ ವಿದ್ಯಾರ್ಥಿನಿಯರು.

ಆ) ೧. ಅಧೀಕ್ಷಕರು ... ೧
೨. ದಿನಗೂಲಿ ಮೇಲೆ ಅಡಿಗೆಯವರು ... ೧
೩. ಅಡಿಗೆ ಸಹಾಯಕರು ... ೧
೪. ರಾತ್ರಿ ಕಾವಲುಗಾರ ... ೧

೫) ೧. ಸಂಬಳ ಬಾಬ್ತು ರೂ. ೧,೯೯೧-೩೦.
೨. ತಿಂಗಳ ಖರ್ಚು ರೂ. ೨,೪೨೭-೫೦.

ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ನಡೆಯಂತ್ತಿರುವ ವಿದ್ಯಾರ್ಥಿನಿಲಯಗಳು ಮತ್ತು ಅನುದಾನ ಪಡೆಯುತ್ತಿರುವ ಖಾಸಗಿ ವಿದ್ಯಾರ್ಥಿನಿಲಯಗಳಲ್ಲಿ ೮೫-೮೬ನೇ ಸಾಲಿನಲ್ಲಿ ವಿದ್ಯಾರ್ಥಿಗಳಿಗೆ ಸಾಮಂಗ್ರಿಗಳನ್ನು ವಿತರಣೆ ಮಾಡುವ ಬಗ್ಗೆ

೧೫೫೧. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ನಡೆಯಂತ್ತಿರುವ ವಿದ್ಯಾರ್ಥಿನಿಲಯಗಳು ಮತ್ತು ಅನುದಾನ ಪಡೆಯುತ್ತಿರುವ ಖಾಸಗಿ ವಿದ್ಯಾರ್ಥಿನಿಲಯಗಳಲ್ಲಿ ೮೫-೮೬ನೇ ಸಾಲಿನಲ್ಲಿರುವ ವಿದ್ಯಾರ್ಥಿಗಳಿಗೆ ಪುಸ್ತಕ ಇತರೆ ಸಾಮಂಗ್ರಿಗಳನ್ನು ವಿತರಣೆ ಮಾಡಲಾಗಿದೆಯೇ,

ಆ) ಹಾಗಿಲ್ಲದಿದ್ದಲ್ಲಿ ಕಾರಣವೇನು ಮತ್ತು ಯಾವಾಗ ವಿತರಣೆ ಮಾಡಲಾಗುವುದು ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಸಚಿವರು).—

ಅ) ೮೫-೮೬ನೇ ಸಾಲಿನಲ್ಲಿ ಎಲ್ಲಾ ಸರ್ಕಾರಿ ಸಾರ್ವಜನಿಕ ವಿದ್ಯಾರ್ಥಿನಿಲಯಗಳಿಗೆ ಪುಸ್ತಕ ಹಾಗೂ ಲೇಖನಿ ಸಾಮಂಗ್ರಿಗಳನ್ನು ಒದಗಿಸಲಾಗಿದೆ, ಆದರೆ, ಈ ಯೋಜನೆಯು ಅನುದಾನಿತ ವಿದ್ಯಾರ್ಥಿನಿಲಯಗಳಿಗೆ ಅನ್ವಯವಾಗುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಕಾರಟಗಿಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರವರ ಕಾರ್ಯಾಲಯಂದ ಕಟ ಡದ ನಿರ್ಮಾಣದ ಬಗ್ಗೆ

೧೪೧೧. ಶ್ರೀ ಶ್ರೀರಂಗದೇವರಾಯಲು (ಕನಕಗಿರಿ).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗಂಗಾವತಿ ತಾಲ್ಲೂಕಿನ ಕಾರಟಗಿಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರವರ ಕಾರ್ಯಾಲಯಕ್ಕೆ ಕಟ್ಟಡವಿಲ್ಲದಿರುವುದು ಸರಕಾರದವರಿಗೆ ಗೊತ್ತಿದೆಯೇ?

ಆ) ಹಾಗಿದ್ದಲ್ಲಿ, ಕಟ್ಟಡ ನಿರ್ಮಾಣದ ಬಗ್ಗೆ ಸರಕಾರದವರು ಕೈಕೊಂಡಿರುವ ಕ್ರಮಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಮಂತ್ರಿಗಳು).—

ಅ) ಗೊತ್ತಿದೆ.

ಆ) ಶಾಶ್ವತವಾಗಿ ಕಛೇರಿ ಕಟ್ಟಡವನ್ನು ಕಟ್ಟುವ ಪ್ರಸ್ತಾವನೆಗೆ ೮೫-೮೬ನೇ ಸಾಲಿನಲ್ಲಿ ಅನುಮತಿ ನೀಡಲಾಗುವುದು.

ಬಂಟವಾಳದಲ್ಲಿ ನೆರೆ ವಿಮೋಚನಾ ರಸ್ತೆಯ ಬಗ್ಗೆ

೧೬೮೨. ಶ್ರೀ ರಮಾನಾಥ ರೈ (ಬಂಟವಾಳ).—ಮಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಂಟವಾಳದಲ್ಲಿ ನೆರೆ ವಿಮೋಚನಾ ರಸ್ತೆಗಾಗಿ ಶಂಕುಸ್ಥಾಪನೆಯಾಗಿ ೪ ವರ್ಷಗಳಾದರೂ ಇನ್ನು ಕೆಲಸ ಪ್ರಾರಂಭವಾಗದಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ,